# ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ
# (SA 2)

# 2019–20

ತರಗತಿ: 8ನೇ ತರಗತಿ ಅಂಕಗಳು: 40

ವಿಷಯ: ಸಮಾಜ ವಿಜ್ಞಾನ ಸಮಯ: 90ನಿಮಿಷ

ಈ ಫೈಲ್ ಒಳಗೊಂಡಿರುವುದು,

- 40 ಅಂಕಗಳಿಗೆ ಎಸ್.ಎಸ್.ಎಲ್.ಸಿ. ಮಾದರಿಯಲ್ಲಿಯ ಪ್ರಶ್ನೆಪತ್ರಿಕೆ
- ಉದ್ದಿಷ್ಟವಾರು, ಕಾಠಿಣ್ಯತೆವಾರು ಪ್ರಶ್ನಾವಾರು ಹಾಗೂ ಥೀಮ್ ವಾರು ಅಂಕಗಳ ಹಂಚಿಕೆ
- ನೀಲನಕಾಶೆ
- ಪ್ರಶ್ನೆ ಪತ್ರಿಕೆ ವಿಶ್ಲೇಷಣೆ
- ಮಾದರಿ ಉತ್ತರಗಳು

–:ರಚನೆ:–
ಮಹಾದೇವಪ್ಪ ಕುಂದರಗಿ,
ಸರ್ಕಾರಿ ಪ್ರೌಢ ಶಾಲೆ ಆವತಿ,
ಚಿಕ್ಕಮಗಳೂರು ತಾ&ಜಿ
9481216233

ಯಾವ ಪುಟ(page)ದಲ್ಲಿಯೂ ಹೆಸರು & ವಾಟರ್ ಮಾರ್ಕ್ ಇರುವುದಿಲ್ಲ

❖ ಸಲಹೆಗಳಿಗೆ ಸದಾ ಸ್ವಾಗತ

# ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ

ತರಗತಿ: 8ನೇ ತರಗತಿ | 2019–20 | ಅಂಕಗಳು: 80

ವಿಷಯ: ಸಮಾಜ ವಿಜ್ಞಾನ | ಸಮಯ:3ಗಂಟೆ

---

**I.** ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಿದ್ದು, ಸರಿಯಾದ ಉತ್ತರವನ್ನು ಆರಿಸಿ ಕ್ರಮಾಕ್ಷರಗಳೊಂದಿಗೆ ಬರೆಯಿರಿ: **4x1=4**

1. ಮಾನವ ಹಕ್ಕುಗಳು ಘೋಷಣೆಯಾದದ್ದು
   A) 1950 ಜನವರಿ 26 B) 1948 ಡಿಸೆಂಬರ್ 10
   C) 1993 ಜುಲೈ 01 D) 2003 ಜನವರಿ 15
2. ಹೊಯ್ಸಳರ ಕಾಲದಲ್ಲಿ 'ಗರುಡ'ರೆಂಬ ರಕ್ಷಕ ಪಡೆ ಇತ್ತು. ಅದರ ಮುಖ್ಯ ಕಾರ್ಯವೆಂದರೆ
   A. ಶತ್ರು ರಾಜ್ಯಗಳೊಡನೆ ಹೋರಾಡಿ ರಾಜ್ಯ ರಕ್ಷಿಸುವುದು
   B. ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವುದು
   C. ಅರಸನಿಗೆ ಅಂಗ ರಕ್ಷಣೆ ಒದಗಿಸುವುದು
   D. ಕಾಡು ಪ್ರಾಣಿಗಳಿಂದ ಸಾಮಾನ್ಯ ಜನರನ್ನು ರಕ್ಷಿಸುವುದು
3. ಇಂದು ಭಾರತದ ರಾಷ್ಟ್ರೀಯ ಆದಾಯದಲ್ಲಿ ಅತ್ಯಂತ ಹೆಚ್ಚು ಪಾಲು ಹೊಂದಿರುವ ವಲಯವೆಂದರೆ
   A) ಪ್ರಾಥಮಿಕ ವಲಯ B) ದ್ವಿತೀಯ ವಲಯ
   C) ತೃತೀಯ ವಲಯ D) ಚತುರ್ಥ ವಲಯ
4. ಕುಟುಂಬ ಒಂದು
   A) ರಾಜಕೀಯ ಸಂಸ್ಥೆ B) ಆರ್ಥಿಕ ಸಂಸ್ಥೆ
   C) ಶೈಕ್ಷಣಿಕ ಸಂಸ್ಥೆ D) ಸಾಮಾಜಿಕ ಸಂಸ್ಥೆ

**II.** ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿರಿ: **4x1=4**

5. 'ಅರ್ಜುನನ ತಪಸ್ಸು' ಎಂಬ ಕಲಾಕೃತಿಯು ಯಾವ ಸ್ಥಳದಲ್ಲಿದೆ?
6. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರನ್ನು ಯಾರು ನೇಮಕ ಮಾಡುತ್ತಾರೆ?
7. ಕೃಷಿ ಸಮಾಜದಲ್ಲಿ ಉಳುಮೆಗೆ ಹೆಚ್ಚಾಗಿ ಬಳಸುವ ಸಾಧನ ಯಾವುದು?
8. ಪಾಲುಗಾರಿಕೆ ಸಂಸ್ಥೆಯನ್ನು ಹೇಗೆ ವಿಸರ್ಜಿಸಬಹುದು?

**III.** ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ: **5x2=10**

9. ಗುಪ್ತರ ಸಾಮ್ರಾಜ್ಯದ ಪತನಕ್ಕೆ ಕಾರಣಗಳೇನು?
10. ಗಂಗರ ಸಾಮ್ರಾಜ್ಯವು ಯಾವ ಮೌಲ್ಯಗಳಿಂದ ಪ್ರಭಾವಿತವಾಗಿದ್ದಿತು?
11. ಸಾಮಾಜಿಕ ಸಂಸ್ಥೆಯ ಲಕ್ಷಣಗಳಾವುವು? ಅಥವಾ ಬೇಟೆಯಾಡುವ ಹಾಗೂ ಆಹಾರ ಸಂಗ್ರಹಿಸುವ ಸಮಾಜದ ಜೀವನ ಶೈಲಿಯನ್ನು ವಿವರಿಸಿ.
12. ಪರಿಸರ ಮಾಲಿನ್ಯದ ವಿಧಗಳನ್ನು ಹೆಸರಿಸಿ.
13. ಚಿಲ್ಲರೆ ವ್ಯಾಪಾರಿಗಳಿಂದಾಗುವ ಸೇವೆಗಳನ್ನು ತಿಳಿಸಿ.

**IV.** ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿರಿ: **3x3=9**

14. ಅಶೋಕನು ಒಬ್ಬ ಮಹಾಶಯನೆಂದು ಇತಿಹಾಸಕಾರರು ಬಣ್ಣಿಸಿದ್ದಾರೆ. ಕಾರಣಗಳೇನು?
15. ಸ್ಥಳೀಯ ಸ್ವಯಂ ಸರ್ಕಾರಗಳ ಆದಾಯದ ಮೂಲಗಳನ್ನು ತಿಳಿಸಿ.
16. ಭಾರತದಲ್ಲಿ ಕೃಷಿ ಬಿಕ್ಕಟ್ಟಿಗೆ ಪರಿಹಾರಗಳನ್ನು ಚರ್ಚಿಸಿರಿ. ಅಥವಾ ಭಾರತೀಯ ಯೋಜನೆಗಳ ವಿಫಲತೆಗೆ ಕಾರಣಗಳನ್ನು ವಿಶ್ಲೇಷಿಸಿ.

**V.** ಈ ಕೆಳಗಿನ ಪ್ರಶ್ನೆಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ: **2x4=8**

17. ಚೋಳರ ಆಳ್ವಿಕೆಯ ಪ್ರಮುಖ ಲಕ್ಷಣಗಳನ್ನು ವಿವರಿಸಿ. ಅಥವಾ ಕಲ್ಯಾಣದ ಚಾಳುಕ್ಯರು ಸಾಹಿತ್ಯಕ್ಕೆ ಯಾವ ರೀತಿ ಉತ್ತೇಜನ ನೀಡಿದರು? ವಿವರಿಸಿ.
18. ಸಾಗರಗಳನ್ನು ನಾವು ಹೇಗೆ ಸಂರಕ್ಷಿಸಬೇಕು?

**VI.** 19. ಭೂಮಿಯ ಚಿತ್ರ ಬರೆದು ಪ್ರಪಂಚದ ಒತ್ತಡ ಪಟ್ಟಿಗಳನ್ನು ಗುರುತಿಸಿ. **1 x 5=5**

## ಎರಡನೆಯ ಸಂಕಲನಾತ್ಮಕ ಮೌಲ್ಯಮಾಪನ

**ತರಗತಿ: 8ನೇ ತರಗತಿ** **2019–20** **ವಿಷಯ: ಸಮಾಜ ವಿಜ್ಞಾನ**

### ಸಾಮರ್ಥ್ಯವಾರು ಅಂಕ ಹಂಚಿಕೆ

| | ಸಾಮರ್ಥ್ಯ | ಅಂಕ | ಶೇಕಡವಾರು |
|---|---|---|---|
| 01 | ಸ್ಮರಣೆ | 06 | 15% |
| 02 | ತಿಳುವಳಿಕೆ | 20 | 50% |
| 03 | ಅನ್ವಯ | 09 | 22% |
| 04 | ಕೌಶಲ | 05 | 13% |

### ಕ್ಲಿಷ್ಟಾನುಸಾರ ಅಂಕ ಹಂಚಿಕೆ

| | | ಅಂಕಗಳು | ಶೇಕಡವಾರು |
|---|---|---|---|
| 01 | ಸುಲಭ | 12 | 30% |
| 02 | ಸಾಮಾನ್ಯ | 20 | 50% |
| 03 | ಕಠಿಣ | 08 | 20% |

### ಪ್ರಶ್ನಾನುಸಾರ ಅಂಕ ಹಂಚಿಕೆ

| | ಪ್ರಶ್ನೆಗಳು | ಪ್ರಶ್ನೆಗಳ ಸಂಖ್ಯೆ | ಅಂಕಗಳು |
|---|---|---|---|
| 01 | ಬಹುಆಯ್ಕೆ ಪ್ರಶ್ನೆಗಳು | 4 x 1 | 04 |
| 02 | ಕಿರು ಉತ್ತರದ ಪ್ರಶ್ನೆಗಳು | 4 x 1 | 04 |
| 03 | ಸಂಕ್ಷಿಪ್ತ ಉತ್ತರದ ಪ್ರಶ್ನೆಗಳು | 5 x 2 | 10 |
| 04 | ದೀರ್ಘ ಉತ್ತರದ ಪ್ರಶ್ನೆಗಳು–1 | 3 x 3 | 09 |
| 05 | ದೀರ್ಘ ಉತ್ತರದ ಪ್ರಶ್ನೆಗಳು–2 | 2 x 4 | 08 |
| 06 | ನಕ್ಷೆ | 1 x 5 | 05 |
| | ಒಟ್ಟು | 19 | 40 |

### ಥೀಮ್ ಅನುಸಾರ (ವಿಭಾಗವಾರು) ಅಂಕ ಹಂಚಿಕೆ

| | ಪ್ರಶ್ನೆಗಳ ಮಾದರಿಗಳು | ಬ.ಪ್ರ | ಕಿ.ಉ.ಪ್ರ | ಸ.ಉ.ಪ್ರ | ದೀ.ಉ.ಪ್ರ1 | ದೀ.ಉ..ಪ್ರ2 | ನಕ್ಷೆ | ಪ್ರಶ್ನೆಗಳು | ಅಂಕಗಳು |
|---|---|---|---|---|---|---|---|---|---|
| 01 | ಇತಿಹಾಸ | 1 | 1 | 2 | 1 | 1 | – | 06 | 13 |
| 02 | ರಾಜ್ಯಶಾಸ್ತ್ರ | 1 | 1 | – | 1 | – | – | 03 | 05 |
| 03 | ಸಮಾಜಶಾಸ್ತ್ರ | 1 | 1 | 1 | – | – | – | 03 | 04 |
| 04 | ಭೂಗೋಳಶಾಸ್ತ್ರ | – | – | 1 | – | 1 | 1 | 03 | 11 |
| 05 | ಅರ್ಥಶಾಸ್ತ್ರ | 1 | – | – | 1 | – | – | 02 | 04 |
| 06 | ವ್ಯವಹಾರ ಅಧ್ಯಯನ | – | 1 | 1 | – | – | – | 02 | 03 |
| | ಒಟ್ಟು | 04 | 04 | 05 | 03 | 02 | 01 | 19 | 40 |

# ಘಟಕವಾರು ಅಂಕ ಹಂಚಿಕೆ

| ಕ್ರ. ಸಂ | ಘಟಕಗಳು | ಸ್ಮರಣೆ | | | | | ತಿಳುವಳಿಕೆ | | | | | ಅನ್ವಯ | | | | | ಕೌಶಲ | | | | | ಒಟ್ಟು ಪ್ರಶ್ನೆ ಗಳು | ಒಟ್ಟು ಅಂಕ ಗಳು |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | MCQ | 1 | 2 | 3 | 4 | MCQ | 1 | 2 | 3 | 4 | MCQ | 1 | 2 | 3 | 4 | 1 | 2 | 3 | 4 | 5 | | |
| 1 | ಮೌರ್ಯರು ಮತ್ತು ಕುಶಾನರು | | | | | | | | | 3(1) | | | | | | | | | | | | 1 | 3 |
| 2 | ಗುಪ್ತರು ಮತ್ತು ವರ್ಧನರು | | | | | | | | 2(1) | | | | | | | | | | | | | 1 | 2 |
| 3 | ದಕ್ಷಿಣ ಭಾರತ–ಶಾತವಾಹನ,ಕದಂಬರು,ಗಂಗರು | | | | | | | | | | | | | 2(1) | | | | | | | | 1 | 2 |
| 4 | ಬಾದಾಮಿಯ ಚಾಲುಕ್ಯರು & ಕಂಚಿಯ ಪಲ್ಲವರು | | 1(1) | | | | | | | | | | | | | | | | | | | 1 | 1 |
| 5 | ಮಾನ್ಯಖೇಟ ರಾಷ್ಟ್ರಕೂಟರು & ಕಲ್ಯಾಣದ ಚಾಲುಕ್ಯರು | | | | | | | | | | 4(1) | | | | | | | | | | | 2 | 5 |
| 6 | ಚೋಳರು ಮತ್ತು ದ್ವಾರಸಮುದ್ರದ ಹೊಯ್ಸಳರು | 1(1) | | | | | | | | | 4(1) | | | | | | | | | | | | |
| 7 | ಮಾನವ ಹಕ್ಕುಗಳು | 1(1) | 1(1) | | | | | | | | | | | | | | | | | | | 2 | 2 |
| 8 | ಸ್ಥಳೀಯ ಸರ್ಕಾರಗಳು | | | | | | | | | 3(1) | | | | | | | | | | | | 1 | 3 |
| 9 | ಸಾಮಾಜಿಕ ಸಂಸ್ಥೆಗಳು | | | | | | 1(1) | | 2(1) | | | | | | | | | | | | | 3 | 4 |
| 10 | ಸಮಾಜದ ಪ್ರಕಾರಗಳು | | 1(1) | | | | | | 2(1) | | | | | | | | | | | | | | |
| 11 | ವಾಯುಗೋಳ | | | | | | | | | | | | | | | | | | | | 5(1) | 1 | 5 |
| 12 | ಜಲಗೋಳ | | | | | | | | | | | | | | | 4(1) | | | | | | 1 | 4 |
| 13 | ಜೀವಗೋಳ | | | 2(1) | | | | | | | | | | | | | | | | | | 1 | 2 |
| 14 | ರಾಷ್ಟ್ರೀಯ ಆದಾಯ ಮತ್ತು ಭಾರತದ ಅರ್ಥವ್ಯವಸ್ಥೆಯ ವಲಯಗಳು | | | | | | 1(1) | | | | | | | | 3(1) | | | | | | | 2 | 4 |
| 15 | ಸರ್ಕಾರ ಮತ್ತು ಅರ್ಥವ್ಯವಸ್ಥೆ | | | | | | | | | | | | | | 3(1) | | | | | | | | |
| 16 | ವ್ಯವಹಾರ ಮತ್ತು ಕೈಗಾರಿಕೆ | | | | | | | | 2(1) | | | | | | | | | | | | | 1 | 2 |
| 17 | ವಿವಿಧ ವ್ಯವಹಾರ ಸಂಘಟನೆಗಳು | | | | | | | 1(1) | | | | | | | | | | | | | | 1 | 1 |
| | **ಒಟ್ಟು** | 1(2) | 1(3) | 2(1) | – | – | 1(2) | 1(1) | 2(3) | 3(2) | 4(1) | – | – | 2(1) | 3(1) | 4(1) | | | | | 5(1) | 19 | 40 |

ಸೂಚನೆ : ಆವರಣದ ಹೊರಗಿನ ಸಂಖ್ಯೆಗಳು ಅಂಕಗಳನ್ನು ಹಾಗೂ ಆವರಣದ ಒಳಗಿನ ಅಂಕಿಗಳು ಪ್ರಶ್ನೆಗಳ ಸಂಖ್ಯೆಯನ್ನು ಸೂಚಿಸುತ್ತವೆ.


# ಪ್ರಶ್ನೆ ಪತ್ರಿಕೆ ವಿಶ್ಲೇಷಣೆ

| ಪ್ರಶ್ನೆ ಸಂಖ್ಯೆ | ಘಟಕ | ಉದ್ದೇಶ | ನಿರೀಕ್ಷಿತ ಫಲ | ಪ್ರಶ್ನೆ ವಿಧ | ಅಂಕ | ಕಾಲ | ಪ್ರಶ್ನೆಯ ಕ್ಲಿಷ್ಟತೆ |
|---|---|---|---|---|---|---|---|
| 1 | ಮಾನವ ಹಕ್ಕುಗಳು | ಸ್ಮರಣೆ | ಸ್ಮರಿಸುವನು | ಬಹುಆಯ್ಕೆ | 1 | 2ನಿ | ಸುಲಭ |
| 2 | ಚೋಳರು ಮತ್ತು ದ್ವಾರಸಮುದ್ರದ ಹೊಯ್ಸಳರು | ತಿಳುವಳಿಕೆ | ವಿವರಿಸುವನು | ಬಹುಆಯ್ಕೆ | 1 | 2ನಿ | ಸಾಧಾರಣ |
| 3 | ರಾಷ್ಟ್ರೀಯ ಆದಾಯ ಮತ್ತು ಭಾರತದ ಅರ್ಥವ್ಯವಸ್ಥೆಯ ವಲಯಗಳು | ತಿಳುವಳಿಕೆ | ವರ್ಗೀಕರಿಸುವನು | ಬಹುಆಯ್ಕೆ | 1 | 2ನಿ | ಸಾಧಾರಣ |
| 4 | ಸಾಮಾಜಿಕ ಸಂಸ್ಥೆಗಳು | ತಿಳುವಳಿಕೆ | ಸಂಬಂಧಿಕರಿಸುವನು | ಬಹುಆಯ್ಕೆ | | 2ನಿ | ಸುಲಭ |
| 5 | ಬಾದಾಮಿಯ ಚಾಲುಕ್ಯರು & ಕಂಚಿಯ ಪಲ್ಲವರು | ಸ್ಮರಣೆ | ಸ್ಮರಿಸುವನು | ಕಿರು ಉತ್ತರದ ಪ್ರಶ್ನೆ | 1 | 2ನಿ | ಸುಲಭ |
| 6 | ಮಾನವ ಹಕ್ಕುಗಳು | ಸ್ಮರಣೆ | ಹೆಸರಿಸುವನು | ಕಿರು ಉತ್ತರದ ಪ್ರಶ್ನೆ | 1 | 2ನಿ | ಸುಲಭ |
| 7 | ಸಮಾಜದ ಪ್ರಕಾರಗಳು | ಸ್ಮರಣೆ | ಹೆಸರಿಸುವನು | ಕಿರು ಉತ್ತರದ ಪ್ರಶ್ನೆ | 1 | 2ನಿ | ಸುಲಭ |
| 8 | ವಿವಿಧ ವ್ಯವಹಾರ ಸಂಘಟನೆಗಳು | ತಿಳುವಳಿಕೆ | ವಿವರಿಸುವನು | ಕಿರು ಉತ್ತರದ ಪ್ರಶ್ನೆ | 1 | 2ನಿ | ಕಠಿಣ |
| 9 | ಗುಪ್ತರು ಮತ್ತು ವರ್ಧನರು | ತಿಳುವಳಿಕೆ | ಕಾರಣ ನೀಡುವನು | ಸಂಕ್ಷಿಪ್ತ ಉತ್ತರದ ಪ್ರಶ್ನೆ | | 4ನಿ | ಸಾಧಾರಣ |
| 10 | ದಕ್ಷಿಣ ಭಾರತ–ಶಾತವಾಹನ,ಕದಂಬರು,ಗಂಗರು | ಅನ್ವಯ | ವಿಶ್ಲೇಷಿಸುವನು | ಸಂಕ್ಷಿಪ್ತ ಉತ್ತರದ ಪ್ರಶ್ನೆ | 2 | 4ನಿ | ಸಾಧಾರಣ |
| 11 | ಸಾಮಾಜಿಕ ಸಂಸ್ಥೆಗಳು/ ಸಮಾಜದ ಪ್ರಕಾರಗಳು | ತಿಳುವಳಿಕೆ | ವಿವರಿಸುವನು | ಸಂಕ್ಷಿಪ್ತ ಉತ್ತರದ ಪ್ರಶ್ನೆ | 2 | 4ನಿ | ಸಾಧಾರಣ |
| 12 | ಜೀವಗೋಳ | ಸ್ಮರಣೆ | ಸ್ಮರಿಸುವನು | ಸಂಕ್ಷಿಪ್ತ ಉತ್ತರದ ಪ್ರಶ್ನೆ | 2 | 4ನಿ | ಸುಲಭ |
| 13 | ವ್ಯವಹಾರ ಮತ್ತು ಕೈಗಾರಿಕೆ | ತಿಳುವಳಿಕೆ | ವಿವರಿಸುವನು | ಸಂಕ್ಷಿಪ್ತ ಉತ್ತರದ ಪ್ರಶ್ನೆ | 2 | 4ನಿ | ಸುಲಭ |
| 14 | ಮೌರ್ಯರು ಮತ್ತು ಕುಶಾನರು | ತಿಳುವಳಿಕೆ | ಕಾರಣ ನೀಡುವನು | ದೀರ್ಘಉತ್ತರದ ಪ್ರಶ್ನೆ–1 | 3 | 8ನಿ | ಸಾಧಾರಣ |
| 15 | ಸಮಾಜದ ಪ್ರಕಾರಗಳು | ತಿಳುವಳಿಕೆ | ವಿವರಿಸುವನು | ದೀರ್ಘಉತ್ತರದ ಪ್ರಶ್ನೆ–1 | 3 | 8ನಿ | ಸುಲಭ |
| 16 | ರಾಷ್ಟ್ರೀಯ ಆದಾಯ ಮತ್ತು ಭಾರತದ ಅರ್ಥವ್ಯವಸ್ಥೆಯ ವಲಯಗಳು | ಅನ್ವಯ | ಚರ್ಚಿಸುವನು | ದೀರ್ಘಉತ್ತರದ ಪ್ರಶ್ನೆ–1 | 3 | 8ನಿ | ಕಠಿಣ |
| | ಸರ್ಕಾರ ಮತ್ತು ಅರ್ಥವ್ಯವಸ್ಥೆ | | ವಿಶ್ಲೇಷಿಸುವನು | | | | |
| 17 | ಮಾನ್ಯಖೇಟ ರಾಷ್ಟ್ರಕೂಟರು & ಕಲ್ಯಾಣದ ಚಾಲುಕ್ಯರು/ ಚೋಳರು ಮತ್ತು ದ್ವಾರಸಮುದ್ರದ ಹೊಯ್ಸಳರು | ತಿಳುವಳಿಕೆ | ವಿವರಿಸುವನು | ದೀರ್ಘಉತ್ತರದ ಪ್ರಶ್ನೆ–2 | 4 | 10ನಿ | ಸಾಧಾರಣ |
| 18 | ಜಲಗೋಳ | ಅನ್ವಯ | ಸ್ಪಷ್ಟೀಕರಿಸುವನು | ದೀರ್ಘಉತ್ತರದ ಪ್ರಶ್ನೆ–2 | 4 | 10ನಿ | ಕಠಿಣ |
| 19 | ವಾಯುಗೋಳ | ಕೌಶಲ | ರಚಿಸುವನು/ಗುರುತಿಸುವನು | ನಕ್ಷೆ | | 10ನಿ | ಸಾಧಾರಣ |
| | ಒಟ್ಟು | | | | 40 | 90ನಿ | |

# ಮಾದರಿ ಉತ್ತರಗಳು

| | |
|---|---|
| 1 | **B)** 1948 ಡಿಸೆಂಬರ್ 10 |
| 2 | **C)** ಅರಸನಿಗೆ ಅಂಗ ರಕ್ಷಣೆ ಒದಗಿಸುವುದು |
| 3 | **A)** ಪ್ರಾಥಮಿಕ ವಲಯ |
| 4 | **D)** ಸಾಮಾಜಿಕ ಸಂಸ್ಥೆ |
| 5 | ಮಹಾಬಲಿಪುರಂ |
| 6 | ರಾಷ್ಟ್ರಪತಿ |
| 7 | ನೇಗಿಲು |
| 8 | ಯಾವುದೇ ಪಾಲುದಾರ ಇತರ ಪಾಲುಗಾರರಿಗೆ 14 ದಿನಗಳ ಮುನ್ಸೂಚನೆ ನೀಡಿ ಇತರರ ಪಾಲುಗಾರರ ಸಮ್ಮತಿಯ ಮೇಲೆ ವಿಸರ್ಜಿಸಬಹುದು |
| 9 | ❖ ಹೂಣರ ದಾಳಿಗೆ ನಿರಂತರವಾಗಿ ಒಳಗಾಗಿ ಗುಪ್ತರ ಸಾಮ್ರಾಜ್ಯವು ಪತನ ಕಂಡಿತು.<br>❖ ಗುಪ್ತರು ಬೃಹತ್ ಸುಸಜ್ಜಿತ ಸೇನೆಯನ್ನೇನೂ ಹೊಂದಿರಲಿಲ್ಲ.<br>❖ ಸಾಮಂತರು ಸೈನ್ಯದ ಅವಶ್ಯಕತೆಯನ್ನು ಯುದ್ಧಗಳ ಸಮಯದಲ್ಲಿ ನೀಗುತ್ತಿದ್ದರು.<br>❖ ಹೀಗಾಗಿಯೇ ಸಾಮಂತರು ಇವರ ಕಾಲದಲ್ಲಿ ಬಹಳಷ್ಟು ಅಧಿಕಾರವನ್ನು ಚಲಾಯಿಸುತ್ತಿದ್ದರು |
| 10 | ❖ ಸತ್ಯಶೀಲತೆ,<br>❖ ಸ್ವಾಮಿನಿಷ್ಠೆ,<br>❖ ಶೌರ್ಯ,<br>❖ ತಾಳ್ಮೆ |
| 11 | ❖ ಸಾರ್ವತ್ರಿಕತೆ<br>❖ ಸಾಮಾಜಿಕ ಸಂಸ್ಥೆಗಳಲ್ಲಿ ನಿಯಮಗಳಿವೆ<br>❖ ಮೂಲಭೂತ ಅವಶ್ಯಕತೆಗಳನ್ನು ಪೂರೈಸುತ್ತವೆ<br>❖ ಲಿಖಿತ ಮತ್ತು ಅಲಿಖಿತ ನೀತಿ ನಿಯಮಗಳು<br>❖ ಪರಸ್ಪರ ಆಂತರಿಕ ಸಂಬಂಧ<br><br>❖ ಬೇಟೆಯಾಡುವುದು, ಮೀನುಗಾರಿಕೆ ಮಾಡುವುದು, ಜೇನು ಮತ್ತು ಗೆಡ್ಡೆ–ಗೆಣಸುಗಳನ್ನು ಸಂಗ್ರಹಿಸುವುದು<br>❖ ಇಲ್ಲಿ ವಯಸ್ಸು ಮತ್ತು ಲಿಂಗದ ಆಧಾರದ ಮೇಲೆ ಸ್ಥಾನಮಾನ ನಿಗದಿಯಾಗಿರುತ್ತದೆ.<br>❖ ಸಂಪತ್ತನ್ನು ಸಂಪಾದಿಸುವ ಆಸೆ ಇಲ್ಲಿ ಇರಲಿಲ್ಲ.<br>❖ ಹಂಚಿಕೊಂಡು ಬದುಕುವುದು<br>❖ ಬೇಟೆ ಸಮಾಜದಲ್ಲಿ ಜನರು ತಮ್ಮ ಆಹಾರಕ್ಕೆ ಪ್ರಾಣಿಗಳನ್ನು ಕಲ್ಲಿನ ಅಯುಧಗಳಿಂದ ಬೇಟೆಯಾಡುತ್ತಿದ್ದರು. |
| 12 | ❖ ವಾಯು ಮಾಲಿನ್ಯ,<br>❖ ಜಲ ಮಾಲಿನ್ಯ<br>❖ ಮಣ್ಣಿನ ಮಾಲಿನ್ಯ,<br>❖ ಶಬ್ದ ಮಾಲಿನ್ಯ |
| 13 | ❖ ಸರಕುಗಳನ್ನು ಸಗಟು ವ್ಯಾಪಾರಿಗಳಿಂದ ಕೊಂಡು ಗ್ರಾಹಕರಿಗೆ ಒದಗಿಸುತ್ತಾರೆ.<br>❖ ಅನೇಕ ಸಾರಿ ಉಂಟಾಗುವ ವ್ಯಾಪಾರ ನಷ್ಟಗಳನ್ನು ತಾವೇ ಭರಿಸುತ್ತಾರೆ,<br>❖ ವಸ್ತುಗಳನ್ನು ಅವುಗಳ ಪ್ರಮಾಣಕ್ಕನುಗುಣವಾಗಿ ವಿಂಗಡಿಸಿ ಗ್ರಾಹಕರ ಇಷ್ಟದಂತೆ ಅವರಿಗೆ ಒದಗಿಸುತ್ತಾರೆ,<br>❖ ಗ್ರಾಹಕರಿಗೆ ಸಾಲ ಸೌಲಭ್ಯಗಳನ್ನು ಕೊಡುತ್ತಾರೆ. |

| | | |
|---|---|---|
| | ❖ ಮಾರುಕಟ್ಟೆಗೆ ಹೊಸದಾಗಿ ಬಂದ ವಸ್ತುಗಳ ಬಗ್ಗೆ ಗ್ರಾಹಕರಿಗೆ ಮಾಹಿತಿ ನೀಡುತ್ತಾರೆ.<br>❖ ಯಾವುದೇ ಒಂದು ನಿರ್ದಿಷ್ಟ ವಸ್ತು ದೊರೆಯದಿದ್ದಲ್ಲಿ ಪರ್ಯಾಯ ವಸ್ತುಗಳ ಬಗ್ಗೆ ತಿಳಿಸುತ್ತಾರೆ | |
| 14 | ❖ ಕಳಿಂಗವನ್ನು ಅಶೋಕ ಗೆದ್ದನಾದರೂ, ಯುದ್ಧದ ಸಾವು ನೋವು ಅವನ ಮನಕಲಕಿತು.<br>❖ ಮತ್ತೆಂದೂ ಯುದ್ಧ ಮಾಡದಿರಲು ನಿರ್ಧರಿಸಿದನು.<br>❖ ದಿಗ್ವಿಜಯಕ್ಕಿಂತ ಧರ್ಮದ ವಿಜಯವೇ ಅತ್ಯುನ್ನತ ವಿಜಯವೆಂದು ಅಶೋಕನು ಭಾವಿಸಿದನು.<br>❖ ಯುದ್ಧವು ಸೃಷ್ಟಿಸಿದ ದುಃಖದಿಂದ ಪಶ್ಚಾತ್ತಾಪದ ಕಡೆ ತೆರಳಿದನು.<br>❖ ತನ್ನ ಉಳಿದ ಜೀವನವನ್ನು ಶಾಂತಿ ಪ್ರತಿಪಾದನೆಗೆ ಮೀಸಲಿಟ್ಟನು.<br>❖ ತನ್ನ ಸಾಮ್ರಾಜ್ಯದಲ್ಲಿ ಪ್ರಾಣಿ, ಪಕ್ಷಿಗಳ ಹತ್ಯೆಯನ್ನು ನಿಷೇಧಿಸಿದನು.<br>❖ ಅಶೋಕನು, ಪ್ರಜೆಗಳೆಲ್ಲರೂ ನನ್ನ ಮಕ್ಕಳಿದ್ದಂತೆ ಎಂದು ಸಾರಿದನು.<br>❖ ತಂದೆ ತಾಯಿಗಳಿಗೆ ವಿಧೇಯರಾಗಿರಬೇಕೆಂದೂ, ಗುರು ಹಿರಿಯರನ್ನು ಗೌರವಿಸಬೇಕೆಂದು ಹೇಳಿದನು.<br>❖ ದೀನರು ಮತ್ತು ಗುಲಾಮರ ಬಗೆಗೆ ದಯೆಯನ್ನು ತೋರುವಂತೆಯೂ ಹೇಳಿದನು.<br>❖ ತಾವೂ ಬದುಕಿ, ಇತರರನ್ನು ಬದುಕಲು ಬಿಡಿ ಎಂದು ಬೋಧಿಸಿದನು.<br>❖ ಸಾಮ್ರಾಜ್ಯದ ಉದ್ದಗಲಕ್ಕೂ ಧರ್ಮ ಸಂದೇಶ ಸಾರುವ ಶಾಸನಗಳನ್ನು ಹಾಕಿಸಿದನು. | |
| 15 | ❖ ನೀರು, ಆರೋಗ್ಯ, ಶಿಕ್ಷಣ, ಗ್ರಂಥಾಲಯ ಮತ್ತು ವಾಚನಾಲಯಗಳ ಮೇಲಿನ ಉಪಕರದಿಂದ ಸಂಗ್ರಹವಾಗುವ ಮೊತ್ತ.<br>❖ ಕಟ್ಟಡ ತೆರಿಗೆ, ಖಾಲಿ ಜಾಗದ ತೆರಿಗೆ, ವ್ಯಾವಹಾರಿಕ ಸಂಸ್ಥೆಗಳ ಮೇಲಿನ ತೆರಿಗೆ, ಮಾರುಕಟ್ಟೆ, ಮನರಂಜನಾಮಂದಿರ ಮತ್ತು ಜಾಹೀರಾತುಗಾರರಿಂದ ವಸೂಲಾಗುವ ಒಟ್ಟು ತೆರಿಗೆ ಮೊತ್ತ.<br>❖ ಪ್ರವಾಸಿ ತಾಣಗಳಿಂದ ಸಂಗ್ರಹಿಸಿದ ತೆರಿಗೆ.<br>❖ ಪಂಚಾಯತ್ ಆಸ್ತಿಗಳಿಂದ ಬರುವ ಬಾಡಿಗೆ ಹಾಗೂ ಗುತ್ತಿಗೆ ಹಣ.<br>❖ ರಾಜ್ಯ ಸರ್ಕಾರದಿಂದ ದೊರೆಯುವ ಧನ ಸಹಾಯ ಅಥವಾ ಅನುದಾನ ಮೊತ್ತ. | |
| 16 | ❖ ಸರ್ಕಾರದ ಹುಡಿಕೆಯನ್ನು ಹೆಚ್ಚಿಸುವುದು<br>❖ ಸಾಲ ಸೌಲಭ್ಯಗಳ ವಿಸ್ತರಣೆ<br>❖ ಮಾರುಕಟ್ಟೆ ಸುಧಾರಣೆಗಳು<br>❖ ಬೆಳೆ ವಿಮೆ<br>❖ ಸಲಹೆ ಮತ್ತು ನೈತಿಕ ಬೆಂಬಲ<br>❖ ಖಾಸಗಿ ಲೇವಾದೇವಿಗಾರರ ನಿಯಂತ್ರಣ | ❖ ಉತ್ಪಾದನೆಯ ಹಾಗೂ ಆದಾಯಗಳ ನಿಧಾನ ಗತಿಯ ಬೆಳವಣಿಗೆ<br>❖ ಬೆಲೆಗಳಲ್ಲಿ ಹೆಚ್ಚಳ ನಿ<br>❖ ರುದ್ಯೋಗದಲ್ಲಿ ಹೆಚ್ಚಳ<br>❖ ಬಡತನ ಮತ್ತು ಅಸಮಾನತೆಯ ಮುಂದುವರಿಕೆ<br>❖ ಮೂಲ ಸೌಕರ್ಯಗಳ ಅಸಮರ್ಪಕ ಅಭಿವೃದ್ಧಿ<br>❖ ಅದಕ್ಷ ಆಡಳಿತ<br>❖ ನಿರೀಕ್ಷಿತ ಪ್ರಮಾಣದಲ್ಲಿ ಇಲ್ಲದ ರಫ್ತು ಹೆಚ್ಚಳ |
| 17 | ❖ ಚೋಳರು ಉತ್ತಮವಾದ ಹಾಗೂ ದಕ್ಷ ಆಡಳಿತ ವ್ಯವಸ್ಥೆಯನ್ನು ತಮ್ಮ ರಾಜ್ಯದಲ್ಲಿ ಏರ್ಪಡಿಸಿದ್ದರು.<br>❖ ರಾಜ್ಯವನ್ನು ಮಂಡಲಂ, ಕೊಟ್ಟಂಗಿ, ನಾಡು, ಕುರ್ರಂ ಅಥವಾ ಗ್ರಾಮ ಸಮುದಾಯ ಹಾಗೂ ತರ–ಕುರಂ ಎಂದು ವಿಭಾಗಿಸಲಾಗಿತ್ತು.<br>❖ ಪ್ರತಿ ಗ್ರಾಮದಲ್ಲೂ 'ಊರ್' ಎಂಬ ಪ್ರಜೆಗಳ ಸಭೆ ಇತ್ತು.<br>❖ ಚೋಳರ ಆಳ್ವಿಕೆಯ ಪ್ರಮುಖ ಲಕ್ಷಣವೆಂದರೆ ಗ್ರಾಮದ ಸ್ವಯಮಾಧಿಪತ್ಯದ ಬೆಳವಣಿಗೆ. | ❖ ಚಾಲುಕ್ಯರ ಕಾಲದಲ್ಲಿ ಸಾಹಿತ್ಯಕ್ಕೆ ಪ್ರೋತ್ಸಾಹ ದೊರಕಿತು.<br>❖ ಜೈನ ವಿದ್ವಾಂಸರ ನೆರವಿನಿಂದ ಕನ್ನಡ ಸಾಹಿತ್ಯವು ಅಭಿವೃದ್ಧಿ ಹೊಂದಿತು.<br>❖ ರನ್ನನ 'ಗದಾಯುದ್ಧ' (ಸಾಹಸಭೀಮ ವಿಜಯ)<br>❖ ದುರ್ಗಸಿಂಹನ 'ಪಂಚತಂತ್ರ'<br>❖ ಬಿಲ್ಹಣನ 'ವಿಕ್ರಮಾಂಕದೇವ ಚರಿತ'<br>❖ ನಯಸೇನನ 'ಧರ್ಮಾಮೃತ'<br>❖ ವಿಜ್ಞಾನೇಶ್ವರನ ಕಾನೂನು ಗ್ರಂಥ 'ಮಿತಾಕ್ಷರ' |

| | | |
|---|---|---|
| | ❖ ಗ್ರಾಮ ಸಭೆಗಳು ಪ್ರಥಮ ಸಭೆಗಳಾಗಿದ್ದವು.<br>❖ ತರ–ಕುರ್‍ರಂ ಒಂದು ಹಳ್ಳಿ. ಪ್ರತಿ ಕುರ್‍ರಂಗೂ 'ಮಹಾಸಭಾ' ಎನ್ನುವ ಗ್ರಾಮಸಭೆ ಇದ್ದಿತು.<br>❖ ಇದನ್ನು 'ಪೆರುಂಗುರಿ' ಎಂದು, ಅದರ ಸದಸ್ಯರನ್ನು 'ಪೆರುಮಕ್ಕಳ್' ಎಂದು ಕರೆಯಲಾಗುತ್ತಿತ್ತು.<br>❖ ಸದಸ್ಯರನ್ನು ಚುನಾವಣೆ ಮೂಲಕಆರಿಸಲಾಗುತ್ತಿತ್ತು.<br>❖ ಸಂಸ್ಕೃತ ವಿದ್ವಾಂಸರು ಹಾಗೂ ಶ್ರೀಮಂತರು ಮಾತ್ರ<br>❖ ಈ ಚುನಾವಣೆಗೆ ಅರ್ಹರಾಗಿದ್ದರು. | ❖ ರಾಜ ಮೂರನೆಯ ಸೋಮೇಶ್ವರನು ಬರೆದ 'ಮಾನಸೋಲ್ಲಾಸ' ಸಂಸ್ಕೃತ ವಿಶ್ವಕೋಶವೆನಿಸಿದೆ.<br>❖ ಚಾಲುಕ್ಯರ ಕಾಲದ ವಿಶಿಷ್ಠ ಕೊಡುಗೆ ವಚನ ಸಾಹಿತ್ಯ.<br>❖ ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು, ಮಾಚಯ್ಯ ಮುಂತಾದವರು<br>❖ ಗಣ್ಯವಚನಕಾರರಾಗಿದ್ದರು. |
| **18** | ❖ ಕಚ್ಚಾ ತೈಲವನ್ನು ಕೊಳವೆ ಮಾರ್ಗಗಳ ಮೂಲಕ ಸಾಗಿಸುವುದು.<br>❖ ಅಣು ಇಂಧನ ತಾಜ್ಯವಸ್ತುಗಳನ್ನು ಸಮುದ್ರ ಸಾಗರಗಳಿಗೆ ಹಾಕುವುದನ್ನು ನಿಯಂತ್ರಿಸುವುದು.<br>❖ ತೀರವಲಯದಲ್ಲಿರುವ ಪೆಟ್ರೋ–ರಾಸಾಯನಿಕ ಹೊರ ಹಾಕುವ ದುರ್ಗಂಧ ವಸ್ತುಗಳ ನಿಯಂತ್ರಣ.<br>❖ ಯಾವುದೇ ರೀತಿಯ ತ್ಯಾಜ್ಯ ವಸ್ತುಗಳನ್ನು ಬಂದರುಗಳಲ್ಲಿ ಎಸೆಯುವುದನ್ನು ನಿಯಂತ್ರಿಸುವುದು<br>❖ ರೇವುಪಟ್ಟಣಗಳ ಸಮೀಪದಲ್ಲಿ ಎಸೆಯುವುದನ್ನು ನಿಯಂತ್ರಿಸುವುದು<br>❖ ತೀರಗಳಲ್ಲಿ ಅದಿರುಗಳ ಸಂಗ್ರಹಣೆ ನಿಯಂತ್ರಿಸುವುದು.<br>❖ ಗಣಿಗಾರಿಕೆ ಕಾರ್ಯ ನಿಯಂತ್ರಿಸುವುದು.<br>❖ ಕರಾವಳಿಯ ಮರಳು ದಂಡೆಗಳನ್ನು (ಬೀಚ್) ಶೋಷಣೆ ಮತ್ತು ವಿನಾಶಗಳ ನಿಯಂತ್ರಣ. | |
| **19** |  | |